**A** | **CCE RF/RR/PF/PR**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**

**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2026 ರ ಪರೀಕ್ಷೆ - 1**

**MARCH/APRIL 2026 EXAMINATION - 1**

## ಮಾದರಿ ಉತ್ತರಗಳು

## MODEL ANSWERS

**ಸಂಕೇತ ಸಂಖ್ಯೆ : 83-K** | **CODE NO. : 83-K**

# ವಿಷಯ : ವಿಜ್ಞಾನ

# Subject : SCIENCE

**(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / Physics, Chemistry & Biology)**

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)**

**(Regular Fresh / Regular Repeater / Private Fresh / Private Repeater)**

**(ಕನ್ನಡ ಮಾಧ್ಯಮ / Kannada Medium)**

**(ಭೌತ ವಿಜ್ಞಾನ / Physics)**

**ದಿನಾಂಕ : 23. 03. 2026 ]** | **[ ಗರಿಷ್ಠ ಅಂಕಗಳು : 80**

**Date : 23. 03. 2026 ]** | **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ – A** <br> **( ಭೌತ ವಿಜ್ಞಾನ )** | |
| **I.** | **ಬಹು-ಆಯ್ಕೆ ಪ್ರಶ್ನೆಗಳು: 2 × 1 = 2** | |
| 1. | ಒಂದು ಮಸೂರದ ಸಾಮರ್ಥ್ಯ + 2D ಆಗಿದೆ. ಆಗ ಆ ಮಸೂರದ ಸಂಗಮದೂರ <br> (A) 0·5 ಮೀ. (B) 2 ಮೀ. <br> (C) 0·2 ಮೀ. (D) 5 ಮೀ. <br> *ಉತ್ತರ :* (A) 0·5 ಮೀ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

2. $20^{\circ}$C ನಲ್ಲಿ ಕೆಲವು ವಸ್ತುಗಳ ರೋಧಶೀಲತೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ :

| ವಸ್ತುಗಳು | ರೋಧಶೀಲತೆ ($\Omega$ m) |
|---|---|
| K | $2{\cdot}63 \times 10^{-8}$ |
| L | $5{\cdot}20 \times 10^{-8}$ |
| M | $1{\cdot}60 \times 10^{-8}$ |
| N | $6{\cdot}84 \times 10^{-8}$ |

ಈ ವಸ್ತುಗಳಲ್ಲಿ ಅತ್ಯುತ್ತಮವಾದ ವಿದ್ಯುತ್‌ವಾಹಕ

(A) N (B) K

(C) M (D) L

***ಉತ್ತರ :*** (C) M 1

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 × 1 = 2**

3. ವಿದ್ಯುತ್ ಮಂಡಲದಲ್ಲಿ ಉಪಯೋಗಿಸುವ ಕೆಳಗಿನ ಘಟಕಗಳ ಚಿಹ್ನೆಯ ಚಿತ್ರವನ್ನು ಬರೆಯಿರಿ :

i) ರಿಯೋಸ್ಟಾಟ್

ii) ಸೇರ್ಪಡೆ ಇಲ್ಲದೆ ದಾಟಿದ ತಂತಿ

***ಉತ್ತರ :***

i) ರಿಯೋಸ್ಟಾಟ್



ಅಥವಾ



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ii) ಸೇರ್ಪಡೆ ಇಲ್ಲದೆ ದಾಟಿದ ತಂತಿ  ½ + ½ | 1 |
| 4. | 5 ಸುತ್ತುಗಳನ್ನು ಹೊಂದಿರುವ ವಾಹಕ ತಂತಿ ಸುರುಳಿಯಿಂದ ಉಂಟಾದ ಕಾಂತಕ್ಷೇತ್ರವು, 1 ಸುತ್ತು ಇರುವ ಸುರುಳಿಯಿಂದ ಉಂಟಾದ ಕಾಂತಕ್ಷೇತ್ರಕ್ಕಿಂತ ಎಷ್ಟು ಪಟ್ಟು ಅಧಿಕವಾಗಿರುತ್ತದೆ ? | |
| | ***ಉತ್ತರ :*** | |
| | 5 ಪಟ್ಟು ಅಧಿಕವಾಗಿರುತ್ತದೆ | 1 |
| **III.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 2 = 6** | |
| 5. | ಕೆಳಗೆ ಕೊಟ್ಟಿರುವ ಚಿತ್ರವನ್ನು ಗಮನಿಸಿ. *A* ಮತ್ತು *B* ರೋಧಕಗಳಲ್ಲಿ, ಯಾವ ರೋಧಕದ ಮೂಲಕ ಹೆಚ್ಚಿನ ವಿದ್ಯುತ್‌ಪ್ರವಾಹವು ಹರಿಯುವುದು ? ನಿಮ್ಮ ಉತ್ತರಕ್ಕೆ ಕಾರಣ ಕೊಡಿ.   | |
| | ***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ★ $A$ ಮತ್ತು $B$ ಎರಡು ರೋಧಕಗಳ ಮೂಲಕ ಸಮನಾದ ವಿದ್ಯುತ್‌ಪ್ರವಾಹವಿರುತ್ತದೆ. 1 | |
| | ★ ರೋಧಕಗಳ ಸರಣಿ ಸಂಯೋಜನೆಯಲ್ಲಿ ಮಂಡಲದ ಪ್ರತಿಯೊಂದು ಭಾಗದಲ್ಲಿ ಸಮನಾದ ವಿದ್ಯುತ್‌ಪ್ರವಾಹವಿರುತ್ತದೆ. 1 | 2 |
| 6. | ಅಪಾಯದ ಸಂಕೇತ ದೀಪಗಳ ಬಣ್ಣ ಯಾವುದು ? ಆ ಬಣ್ಣವನ್ನು ಏಕೆ ಬಳಸಲಾಗುವುದು ? | |
| | ***ಉತ್ತರ :*** | |
| | ★ ಕೆಂಪು ಬಣ್ಣದ್ದಾಗಿರುತ್ತದೆ. 1 | |
| | ★ ಕೆಂಪು ಬಣ್ಣವು ಮಂಜು ಮತ್ತು ಹೊಗೆಯಿಂದ ಕನಿಷ್ಟ ಚದುರುತ್ತದೆ. ಆದ್ದರಿಂದ ದೂರದಿಂದಲೂ ಕೆಂಪು ಬಣ್ಣವನ್ನು ಕಾಣಬಹುದು. 1 | 2 |
| 7. | a) ಫ್ಲೆಮಿಂಗ್‌ನ ಎಡಗೈ ನಿಯಮವನ್ನು ನಿರೂಪಿಸಿ. | |
| | b) ನಮ್ಮ ದೇಶದಲ್ಲಿ ಗೃಹ ವಿದ್ಯುತ್‌ಮಂಡಲದ ಸಜೀವ ತಂತಿ ಮತ್ತು ತಟಸ್ಥ ತಂತಿಗಳ ನಡುವಣ ವಿಭವಾಂತರ ಎಷ್ಟು ? | |
| | ***ಉತ್ತರ :*** | |
| | a) ನಿಮ್ಮ ಎಡಗೈನ ಹೆಬ್ಬೆರಳು, ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹಿಡಿದುಕೊಳ್ಳಿ. ತೋರುಬೆರಳು ಕಾಂತಕ್ಷೇತ್ರದ ದಿಕ್ಕನ್ನು, ಮಧ್ಯದ ಬೆರಳು ವಿದ್ಯುತ್‌ಪ್ರವಾಹದ ದಿಕ್ಕನ್ನು ಹಾಗೂ ಹೆಬ್ಬೆರಳು ವಾಹಕದ ಮೇಲೆ ವರ್ತಿಸುವ ಚಲನೆಯ ಅಥವಾ ಬಲದ ದಿಕ್ಕನ್ನು ಸೂಚಿಸುತ್ತದೆ. 1 | |
| | b) ನಮ್ಮ ದೇಶದಲ್ಲಿ ಗೃಹ ವಿದ್ಯುತ್‌ಮಂಡಲದ ಸಜೀವ ತಂತಿ ಮತ್ತು ತಟಸ್ಥ ತಂತಿಗಳ ನಡುವಣ ವಿಭವಾಂತರ 220 V ಆಗಿದೆ. 1 | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| IV. | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $3 \times 3 = 9$** | |
| 8. | ಪ್ರಿಸ್‌ಬಯೋಪಿಯಾ ಎಂದರೇನು ? ಈ ದೋಷಕ್ಕೆ ಕಾರಣಗಳೇನು ? ಈ ದೋಷಕ್ಕೆ ಒಂದು ಪರಿಹಾರವನ್ನು ಸೂಚಿಸಿ.<br>**ಅಥವಾ**<br>ಸಮೀಪ ದೃಷ್ಟಿ ಎಂದರೇನು ? ಈ ದೋಷಕ್ಕೆ ಕಾರಣಗಳೇನು ? ಈ ದೋಷವನ್ನು ಹೇಗೆ ಸರಿಪಡಿಸಬಹುದು ?<br>*ಉತ್ತರ :*<br>★ ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ಮತ್ತು ದೂರದ ವಸ್ತುಗಳನ್ನು ನೋಡಲು ಸಾಧ್ಯವಿಲ್ಲದ ಕಣ್ಣಿನ ಸ್ಥಿತಿ / ಸಮೀಪ ದೃಷ್ಟಿ ಮತ್ತು ದೂರದೃಷ್ಟಿ ಎರಡರಿಂದಲೂ ಬಳಲುವುದು. ½<br>★ ವಯಸ್ಸಾದಂತೆ ಕಣ್ಣಿನ ಹೊಂದಾಣಿಕೆ ಸಾಮರ್ಥ್ಯ ಕಡಿಮೆಯಾಗುತ್ತದೆ. ½<br>★ ಕಾರಣ : ಕಣ್ಣಿನ ಮಸೂರವು ತನ್ನ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುವುದು. ½<br>★ ಕ್ರಮೇಣ ಸಿಲಿಯರಿ ಸ್ನಾಯುಗಳು ದುರ್ಬಲಗೊಳ್ಳುವುದು. ½<br>(ಯಾವುದಾದರೂ ಎರಡು ಕಾರಣಗಳು)<br>★ *ಪರಿಹಾರ :* ದ್ವಿಸಂಗಮ ಮಸೂರಗಳನ್ನು ಬಳಸುವುದು. 1 | 3 |
| | **ಅಥವಾ**<br>ಸಮೀಪದ ವಸ್ತುಗಳನ್ನು ನೋಡಬಲ್ಲ, ಆದರೆ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲಾರದ ಸ್ಥಿತಿಗೆ ಸಮೀಪ ದೃಷ್ಟಿ ಎನ್ನುತ್ತಾರೆ. 1<br>*ಕಾರಣಗಳು :*<br>i) ಕಣ್ಣಿನ ಮಸೂರದ ವಿಪರೀತ ವಕ್ರತೆ<br>ii) ಕಣ್ಣುಗುಡ್ಡೆಯು ಸಹಜ ಸ್ಥಿತಿಗಿಂತ ಉದ್ದವಾಗಿರುವುದು. ½ + ½<br>*ಪರಿಹಾರ :* ಸೂಕ್ತ ಸಾಮರ್ಥ್ಯವುಳ್ಳ, ನಿಮ್ನ ಮಸೂರವನ್ನು ಬಳಸುವುದು. 1 | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ಫ್ಯೂಸ್ ಎಂದರೇನು ? ವಿದ್ಯುತ್‌ಮಂಡಲದಲ್ಲಿ ಓವರ್‌ಲೋಡ್ ಮತ್ತು ಹ್ರಸ್ವಮಂಡಲ ಉಂಟಾಗಲು ಕಾರಣಗಳೇನು ? | |
| | **ಅಥವಾ** | |
| | ಭೂ ಸಂಪರ್ಕ ತಂತಿ ಎಂದರೇನು ? ಭೂ ಸಂಪರ್ಕ ತಂತಿಯ ಕಾರ್ಯವನ್ನು ವಿವರಿಸಿ. | |
| | ***ಉತ್ತರ :*** | |
| | ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ವಿದ್ಯುತ್‌ಪ್ರವಾಹವು ವಿದ್ಯುತ್‌ಮಂಡಲದ ಮೂಲಕ ಪ್ರವಹಿಸಿದಾಗ ಮಂಡಲವನ್ನು ಕಡಿತಗೊಳಿಸುವ ಒಂದು ಸುರಕ್ಷಾ ಸಾಧನ. 1 | |
| | ★ ಮಂಡಲದಲ್ಲಿನ ಸಜೀವ ತಂತಿ ಮತ್ತು ತಟಸ್ಥ ತಂತಿಗಳು ನೇರ ಸಂಪರ್ಕಕ್ಕೆ ಬರುವುದು | |
| | ★ ತಂತಿಗಳ ಮೇಲಿನ ಅವಾಹಕ ಹೊದಿಕೆ ಹಾನಿಗೊಳಗಾಗುವುದು | |
| | ★ ವಿದ್ಯುತ್ ಉಪಕರಣಗಳಲ್ಲಿ ದೋಷವುಂಟಾಗುವುದು | |
| | ★ ಹಲವು ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸುವುದು $\frac{1}{2} \times 4$ | 3 |
| | **ಅಥವಾ** | |
| | ಲೋಹದ ಮೇಲ್ಮೈ ಹೊಂದಿರುವ ಉಪಕರಣಗಳನ್ನು ಭೂಮಿಗೆ ಸಂಪರ್ಕಿಸಲು ಬಳಸುವ ವಾಹಕ ತಂತಿ. 1 | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಲೋಹದ ಮೇಲ್ಮೈ ಹೊಂದಿರುವ ಉಪಕರಣಕ್ಕೆ ಯಾವುದೇ ರೀತಿಯ ವಿದ್ಯುತ್ ಸೋರಿಕೆ ಉಂಟಾದಲ್ಲಿ ಅದರ ವಿಭವಾಂತರವನ್ನು ಭೂಮಿಯ ವಿಭವಾಂತರಕ್ಕೆ ಸಮನಾಗಿಸುತ್ತದೆ ಮತ್ತು ಬಳಕೆದಾರನ್ನು ವಿದ್ಯುತ್ ಆಘಾತಗಳಿಂದ ರಕ್ಷಿಸುತ್ತದೆ. ( 1 + 1 ) 2 | 3 |
| 10. | ಒಂದು ನಿಮ್ನ ದರ್ಪಣದ '$C$' ನಲ್ಲಿ ವಸ್ತುವೊಂದನ್ನು ಇರಿಸಿದಾಗ ಪ್ರತಿಬಿಂಬ ಉಂಟಾಗುವಿಕೆಯನ್ನು ತೋರಿಸುವ ರೇಖಾಚಿತ್ರವನ್ನು ಬರೆಯಿರಿ. ಉಂಟಾಗುವ ಪ್ರತಿಬಿಂಬದ ಸ್ವಭಾವವನ್ನು ಬರೆಯಿರಿ. | |

[ $C$ : ವಕ್ರತಾ ಕೇಂದ್ರ ]

***ಉತ್ತರ :***




ನಿಮ್ನ ದರ್ಪಣ ½

ವಸ್ತುವಿನ ನಿಖರ ಸ್ಥಾನ ½

ಪ್ರತಿಬಿಂಬದ ನಿಖರ ಸ್ಥಾನ ½

ಸಮರ್ಪಕ ರೇಖೆಗಳು ½

ಪ್ರತಿಬಿಂಬದ ಸ್ವಭಾವ : ಸತ್ಯ ಮತ್ತು ತಲೆಕೆಳಗಾದ ಪ್ರತಿಬಿಂಬ ½ + ½ — 3

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| V. | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 × 4 = 8** | |
| 11. | a) ಬೆಳಕಿನ ವಕ್ರೀಭವನದ ನಿಯಮಗಳನ್ನು ನಿರೂಪಿಸಿ. | |
| | b) ಪೀನ ದರ್ಪಣ ಮತ್ತು ಪೀನ ಮಸೂರಗಳ ನಡುವಣ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ. | |
| | **ಅಥವಾ** | |
| | a) ವರ್ಧನೆ ಎಂದರೇನು ? ಒಂದು ಮಸೂರದಿಂದ ಉಂಟಾದ ಪ್ರತಿಬಿಂಬದ ವರ್ಧನೆಯನ್ನು ಕಂಡುಹಿಡಿಯಲು ಬಳಸುವ ಸೂತ್ರವನ್ನು ಬರೆಯಿರಿ. | |
| | b) ಬೆಳಕಿನ ಪ್ರತಿಫಲನದ ನಿಯಮಗಳನ್ನು ಬರೆಯಿರಿ. | |
| | ***ಉತ್ತರ:*** | |
| | a) i) ಪತನಕಿರಣ, ವಕ್ರೀಭವನ ಕಿರಣ ಮತ್ತು ಎರಡು ಮಾಧ್ಯಮಗಳ ಸಂಪರ್ಕ ಮೇಲ್ಮೈಗೆ ಪತನಬಿಂದುವಿನಲ್ಲಿ ಎಳೆದ ಲಂಬ ಎಲ್ಲವೂ ಒಂದೇ ಸಮತಲದಲ್ಲಿರುತ್ತದೆ. | 1 |
| | ii) ಕೊಟ್ಟಿರುವ ಬೆಳಕಿನ ನಿರ್ದಿಷ್ಟ ಬಣ್ಣ ಮತ್ತು ನೀಡಿರುವ ಜೋಡಿ ಮಾಧ್ಯಮಗಳಿಗೆ ಪತನಕೋನದ ಸೈನು ಮತ್ತು ವಕ್ರಿಮ ಕೋನದ ಸೈನುಗಳ ಅನುಪಾತ ಸ್ಥಿರವಾಗಿರುತ್ತದೆ. / $\frac{\sin i}{\sin r}$ = ಸ್ಥಿರಾಂಕ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

b)

| ಪೀನ ದರ್ಪಣ | ಪೀನ ಮಸೂರ |
|---|---|
| ★ ಪ್ರತಿಫಲಿಸಲ್ಪಟ್ಟ ಕಿರಣಗಳು ಪ್ರಧಾನ ಅಕ್ಷದ ಮೇಲಿರುವ ಒಂದು ಬಿಂದುವಿನಿಂದ ಬಂದಂತೆ ಭಾಸವಾಗುತ್ತದೆ | ★ ವಕ್ರೀಭವನಗೊಂಡ ಕಿರಣಗಳು ಪ್ರಧಾನಾಕ್ಷದ ಮೇಲಿನ ಒಂದು ಬಿಂದುವಿನಲ್ಲಿ ಕೇಂದ್ರೀಕರಿಸಲ್ಪಡುತ್ತವೆ. |
| ★ ಪ್ರತಿಬಿಂಬವು ಮಿಥ್ಯ ಮತ್ತು ನೇರ | ★ ಸತ್ಯ ಮತ್ತು ತಲೆಕೆಳಗಾದ ಪ್ರತಿಬಿಂಬ / ಮಿಥ್ಯ ಮತ್ತು ನೇರವಾದ ಪ್ರತಿಬಿಂಬ |
| ★ ಪ್ರತಿಬಿಂಬ ಚಿಕ್ಕದಾಗಿರುತ್ತದೆ. | ★ ವಸ್ತುವಿನ ಸ್ಥಾನಕ್ಕನುಗುಣವಾಗಿ ಪ್ರತಿಬಿಂಬದ ಗಾತ್ರ ಬದಲಾಗುತ್ತದೆ. |

(ಯಾವುದಾದರೂ ಎರಡು ಅಂಶಗಳು) 1 + 1

(***ಸೂಚನೆ:*** ಸೂಕ್ತ ಉಪಯೋಗಗಳನ್ನು ಬರೆದರೂ ಅಂಕಗಳನ್ನು ನೀಡುವುದು.) 4

**ಅಥವಾ**

a) ಒಂದು ವಸ್ತುವಿನ ಗಾತ್ರ ಹಾಗೂ ಪ್ರತಿಬಿಂಬದ ಗಾತ್ರದ ಅನುಪಾತವನ್ನು ವರ್ಧನೆ ಎನ್ನುತ್ತೇವೆ. 1

$m = \frac{h^1}{h}$ / $m = \frac{v}{u}$ 1

b) ಪ್ರತಿಫಲನದ ನಿಯಮಗಳು :

i) ಪತನ ಕೋನವು ಪ್ರತಿಫಲನ ಕೋನಕ್ಕೆ ಸಮನಾಗಿರುತ್ತದೆ. 1

ii) ಪತನ ಕಿರಣ, ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು ಪ್ರತಿಫಲಿತ ಕಿರಣ, ಈ ಮೂರೂ ಒಂದೇ ಸಮತಲದಲ್ಲಿರುತ್ತವೆ. 1 4

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 12. | ಒಂದು ವಿದ್ಯುತ್‌ಮಂಡಲದಲ್ಲಿ 2 Ω ರೋಧವಿರುವ ಎರಡು ರೋಧಕಗಳನ್ನು ಮೊದಲು ಸರಣಿ ಕ್ರಮದಲ್ಲಿ ನಂತರ ಸಮಾಂತರ ಕ್ರಮದಲ್ಲಿ 6 V ವಿಭವಾಂತರಕ್ಕೆ ಸಂಪರ್ಕಿಸಲಾಗಿದೆ. ಸರಣಿ ಹಾಗೂ ಸಮಾಂತರ ಜೋಡಣೆಯಲ್ಲಿ ಈ ಮಂಡಲದ ವಿದ್ಯುತ್ ಸಾಮರ್ಥ್ಯವನ್ನು ಕಂಡುಹಿಡಿಯಿರಿ. | |
| | ***ಉತ್ತರ :*** | |
| | $V = 6\text{ V}$ $R_1 = 2\ \Omega$ $R_2 = 2\ \Omega$ | |
| | $R_s = R_1 + R_2$ | 1 |
| | $R_s = 2 + 2 = 4\ \Omega$ | |
| | $\frac{1}{R_p} = \frac{1}{R_1} + \frac{1}{R_2}$ | 1 |
| | $\frac{1}{R_p} = \frac{1}{2} + \frac{1}{2} = 1\ \Omega$ | |
| | $R_p = 1\ \Omega$ | |
| | $P_s = \frac{V^2}{R_s} = \frac{6^2}{4} = \frac{36}{4} = 9W$ | 1 |
| | $P_p = \frac{V^2}{R_p} = \frac{6^2}{1} = \frac{36}{1} = 36\text{ W}$ | 1 |
| | **ಮತ್ತೊಂದು ವಿಧಾನದಲ್ಲಿ ಈ ಸಮಸ್ಯೆಯನ್ನು ಪರಿಹರಿಸಬಹುದು.** | |
| | $V = 6\text{ V}$ $R_1 = 2\ \Omega$ $R_2 = 2\ \Omega$ | |
| | $R_s = R_1 + R_2$ | 1 |
| | $R_s = 2 + 2 = 4\ \Omega$ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | $V = I_s R_s$ | | |
| | $I_s = \frac{V}{R_s} = \frac{6}{4} = 1{\cdot}5\ \text{A}$ | | |
| | $\frac{1}{R_p} = \frac{1}{R_1} + \frac{1}{R_2}$ | 1 | |
| | $\frac{1}{R_p} = \frac{1}{2} + \frac{1}{2} = 1\ \Omega$ | | |
| | $R_p = 1\ \Omega$ | | |
| | $V = I_p R_p$ | | |
| | $I_p = \frac{V}{R_p} = \frac{6}{1} = 6\text{A}$ | | |
| | $P_s = V.I_s$ | 1 | |
| | $P_s = 6 \times 1{\cdot}5 = 9\ \text{W}$ | | |
| | $P_p = V.I_p$ | 1 | |
| | $P_p = 6 \times 6 = 36\ \text{W}$ | | 4 |

| A | CCE RF/RR/ PF/PR |
|---|---|

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**

**MALLESHWARAM, BENGALURU – 560 003**

ಮಾರ್ಚ್/ಏಪ್ರಿಲ್ 2026 ರ ಪರೀಕ್ಷೆ - 1

**MARCH/APRIL 2026 EXAMINATION - 1**

## ಮಾದರಿ ಉತ್ತರಗಳು

## MODEL ANSWERS

ಸಂಕೇತ ಸಂಖ್ಯೆ : **83-K** CODE NO. : **83-K**

## ವಿಷಯ : ವಿಜ್ಞಾನ

## Subject : SCIENCE

(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / **Physics, Chemistry & Biology**)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(**Regular Fresh / Regular Repeater / Private Fresh / Private Repeater**)

(ಕನ್ನಡ ಮಾಧ್ಯಮ / **Kannada Medium**)

(ರಸಾಯನ ವಿಜ್ಞಾನ / **Chemistry**)

ದಿನಾಂಕ : 23. 03. 2026 ] [ ಗರಿಷ್ಠ ಅಂಕಗಳು : 80

Date : 23. 03. 2026 ] [ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ – B**<br>**( ರಸಾಯನ ವಿಜ್ಞಾನ )** | |
| **VI.** | **ಬಹು-ಆಯ್ಕೆ ಪ್ರಶ್ನೆಗಳು : 3 × 1 = 3** | |
| 13. | ಸತುವಿಗೆ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲವನ್ನು ಬೆರೆಸಿದಾಗ ಬಿಡುಗಡೆಯಾಗುವ ಅನಿಲ,<br>(A) ಆಕ್ಸಿಜನ್<br>(B) ಹೈಡ್ರೋಜನ್<br>(C) ನೈಟ್ರೋಜನ್<br>(D) ಕ್ಲೋರಿನ್<br>*ಉತ್ತರ :* (B) ಹೈಡ್ರೋಜನ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಶುದ್ಧ ಕಬ್ಬಿಣವನ್ನು ಕಠಿಣ ಮತ್ತು ಬಲಯುತವನ್ನಾಗಿಸಲು,<br>(A) ಇತರ ಲೋಹಗಳೊಂದಿಗೆ ಇದನ್ನು ಸಂಯೋಜಿಸಲಾಗುವುದು<br>(B) ಆನೋಡೀಕರಣವನ್ನು ಮಾಡಲಾಗುವುದು<br>(C) ಸತುವನ್ನು ಸೇರಿಸಲಾಗುವುದು<br>(D) ನಿಗದಿತ ಪ್ರಮಾಣದಲ್ಲಿ ಕಾರ್ಬನ್ ಅನ್ನು ಸೇರಿಸಲಾಗುವುದು<br>***ಉತ್ತರ :*** (D) ನಿಗದಿತ ಪ್ರಮಾಣದಲ್ಲಿ ಕಾರ್ಬನ್ ಅನ್ನು ಸೇರಿಸಲಾಗುವುದು | 1 |
| 15. | ಇತರ ಕಾರ್ಬನ್ ಪರಮಾಣುಗಳೊಂದಿಗೆ ಬಂಧಗಳನ್ನು ರಚಿಸಿಕೊಂಡು ದೊಡ್ಡ ಅಣುವನ್ನು ಉಂಟುಮಾಡುವ ಕಾರ್ಬನ್‌ನ ವಿಶೇಷ ಗುಣ<br>(A) ಚತುರ್ವೇಲೆನ್ಸಿ (B) ದಹ್ಯಶೀಲತೆ<br>(C) ಕೆಟನೀಕರಣ (D) ಬಹುರೂಪತೆ<br>***ಉತ್ತರ :*** (C) ಕೆಟನೀಕರಣ | 1 |
| **VII.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 1 = 3** | |
| 16. | $C_3H_7COOH$ ಅಣುವಿನಲ್ಲಿರುವ ಏಕಬಂಧ ಮತ್ತು ದ್ವಿಬಂಧಗಳು ಎಷ್ಟು ?<br>***ಉತ್ತರ:***<br>★ 11/12 — ಏಕಬಂಧಗಳು<br>★ 1 — ದ್ವಿಬಂಧ<br>(***ಸೂಚನೆ*** : CH ಗುಂಪನ್ನು ಬಿಡಿಸಿ ಬರೆದಾಗ 12 ಏಕಬಂಧಗಳು ಆದರೆ ವಿದ್ಯಾರ್ಥಿ ಪುಸ್ತಕದಲ್ಲಿರುವ ಆಧಾರದಂತೆ ಬರೆದಾಗ 11 ಏಕಬಂಧಗಳು. ಹಾಗಾಗಿ 11/12 ಏಕಬಂಧಗಳೆರಡನ್ನು ಪರಿಗಣಿಸಿ ) 2 × ½ | 1 |
| 17. | ಕೊಟ್ಟಿರುವ ಸಮೀಕರಣವನ್ನು ಗಮನಿಸಿ :<br>$\boxed{W}\ Pb\left(NO_3\right)_2 \longrightarrow \boxed{X}\ PbO + \boxed{Y}\ NO_2 + \boxed{Z}\ O_2$<br>ಈ ಸಮೀಕರಣವನ್ನು ಸರಿದೂಗಿಸಿದಾಗ *W, X, Y* ಮತ್ತು *Z* ಸ್ಥಾನಗಳಲ್ಲಿನ ಅಣುಗಳ ಸಂಖ್ಯೆಗಳು ಕ್ರಮವಾಗಿ ಯಾವುದಾಗಿರುತ್ತವೆ ?<br>***ಉತ್ತರ:***<br>2, 2, 4, 1. | 1 |
| 18. | ಮ್ಯಾಂಗನೀಸ್ ಲೋಹದ ಉದ್ಧರಣೆಯಲ್ಲಿ ಅಲ್ಯೂಮಿನಿಯಂ ಹಾಗೂ ತಾಮ್ರ ಇವುಗಳಲ್ಲಿ ಯಾವ ಲೋಹವನ್ನು ಅಪಕರ್ಷಣಕಾರಿಯಾಗಿ ಬಳಸಲಾಗುವುದು ? ಏಕೆ ?<br>***ಉತ್ತರ:*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಅಲ್ಯುಮಿನಿಯಂ | |
| | ★ ಏಕೆಂದರೆ, ಅಲ್ಯುಮಿನಿಯಂ ಮ್ಯಾಂಗನೀಸ್‌ಗಿಂತ ಹೆಚ್ಚು ಕ್ರಿಯಾಶೀಲ / ತಾಮ್ರವು ಮ್ಯಾಂಗನೀಸ್‌ಗಿಂತ ಕಡಿಮೆ ಕ್ರಿಯಾಶೀಲ. / ಅಲ್ಯುಮಿನಿಯಂ ಆಕ್ಸಿಜನ್ ಜೊತೆಗೆ ತಾಮ್ರಕ್ಕಿಂತ ಹೆಚ್ಚು ಆಕರ್ಷಣೆಯನ್ನು ಹೊಂದಿದೆ. | 1 |
| **VIII.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **3 × 2 = 6** | |
| 19. | ಆಮ್ಲವನ್ನು ಸಾರರಿಕ್ತಗೊಳಿಸುವಾಗ, ಆಮ್ಲಕ್ಕೆ ನೀರನ್ನು ಸೇರಿಸಬಾರದು. ಏಕೆ ? | |
| | ***ಉತ್ತರ :*** | |
| | ★ ಆಮ್ಲವನ್ನು ಸಾರರಿಕ್ತಗೊಳಿಸುವ ಕ್ರಿಯೆ ತೀವ್ರ ಬಹಿರುಷ್ಣಕ. ½ | |
| | ★ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಿ ಸುಟ್ಟಗಾಯಗಳಾಗಬಹುದು. 1 | |
| | ★ ಅತಿಯಾದ ಬಿಸಿಯಾಗುವಿಕೆಯಿಂದ ಗಾಜಿನ ಸಂಗ್ರಾಹಕ ಒಡೆಯಬಹುದು. ½ | 2 |
| 20. | ಈಥೇನಿನ ಒಂದು ಹೈಡ್ರೋಜನ್ ಪರಮಾಣುವನ್ನು –CHO ಗುಂಪಿನಿಂದ ಸ್ಥಾನ ಪಲ್ಲಟಗೊಳಿಸಿದಾಗ ಉಂಟಾಗುವ ಸಂಯುಕ್ತದ ಹೆಸರು, ಅಣುಸೂತ್ರ ಮತ್ತು ರಚನಾಸೂತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | ★ ಪ್ರೋಪೇನ್ಯಾಲ್ ½ | |
| | ★ $CH_3CH_2CHO$ / $C_2H_5CHO$ ½ | |
| | ★  1 | 2 |
| 21. | ಹುರಿಯುವಿಕೆ ಮತ್ತು ಕಾಸುವಿಕೆಗಳ ನಡುವಣ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ. | |
| | **ಅಥವಾ** | |
| | ಇಲೆಕ್ಟ್ರಾನ್‌ಗಳ ವರ್ಗಾವಣೆಯಿಂದ ಸೋಡಿಯಂ ಕ್ಲೋರೈಡ್ ಅಣು ಉಂಟಾಗುವಿಕೆಯನ್ನು ಇಲೆಕ್ಟ್ರಾನ್ ಚುಕ್ಕಿ ಚಿತ್ರದ ಸಹಾಯದಿಂದ ತೋರಿಸಿ. | |
| | ***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

| ಹುರಿಯುವಿಕೆ | ಕಾಸುವಿಕೆ |
|---|---|
| ★ ಸಲ್ಫೈಡ್ ಅದುರನ್ನು ಪುಷ್ಟೀಕರಿಸುವ ವಿಧಾನ. | ★ ಕಾರ್ಬೊನೇಟ್ ಅದುರನ್ನು ಪುಷ್ಟೀಕರಿಸುವ ವಿಧಾನ. |
| ★ ಅದುರನ್ನು ಅಧಿಕ ಪ್ರಮಾಣದ ಗಾಳಿ ಮತ್ತು ಹೆಚ್ಚಿನ ಉಷ್ಣತೆಯಲ್ಲಿ ಕಾಸುವುದು. | ★ ಅದುರನ್ನು ಕಡಿಮೆ ಪ್ರಮಾಣದ ಗಾಳಿ ಮತ್ತು ಹೆಚ್ಚಿನ ಉಷ್ಣತೆಯಲ್ಲಿ ಕಾಸುವುದು. |

1 + 1

**ಅಥವಾ**

$Na \longrightarrow Na^{+} + e^{-}$

(2, 8, 1) ( 2, 8) ½

$Cl + e^{-} \longrightarrow Cl^{-}$

(2, 8, 7) (2, 8) ½



1

(***ಸೂಚನೆ:*** ಎಲೆಕ್ಟ್ರಾನ್ ವಿನ್ಯಾಸ ಬರೆಯುವುದು ಕಡ್ಡಾಯವಲ್ಲ) 2

**IX.** **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **3 × 3 = 9**

22. ಕೆಳಗಿನ ಸಂಯುಕ್ತಗಳ ಅಣುಸೂತ್ರವನ್ನು ಬರೆಯಿರಿ ಮತ್ತು ಪ್ರತಿಯೊಂದರ ಎರಡು ಉಪಯೋಗಗಳನ್ನು ತಿಳಿಸಿ.

i) ವಾಷಿಂಗ್ ಸೋಡಾ

ii) ಪ್ಲಾಸ್ಟರ್ ಆಫ್ ಪ್ಯಾರೀಸ್

**ಅಥವಾ**

a) ಸ್ಫಟಿಕೀಕರಣ ನೀರು ಎಂದರೇನು ?

b) ಕೆಳಗಿನವುಗಳಲ್ಲಿ ಬಳಸುವ ಲವಣಗಳನ್ನು ಹೆಸರಿಸಿ :

i) ಬೆಂಕಿ ಆರಿಸುವ ಉಪಕರಣಗಳಲ್ಲಿ

ii) ಕಾಗದ ಕಾರ್ಖಾನೆಯಲ್ಲಿ ಮರದ ತಿರುಳನ್ನು ಚಲುವೆ ಮಾಡುವಾಗ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಉತ್ತರ : | |
| | i) $Na_2CO_3 . 10H_2O$ / $Na_2CO_3$ ½ | |
| | ★ ಗಾಜು, ಸಾಬೂನು ಮತ್ತು ಕಾಗದ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಾರೆ | |
| | ★ ಬೋರಾಕ್ಸ್‌ನಂತಹ ಸೋಡಿಯಂ ಸಂಯುಕ್ತಗಳ ಉತ್ಪಾದನೆಯಲ್ಲಿ | |
| | ★ ಗೃಹಬಳಕೆ ಸ್ವಚ್ಛಕಾರಿಯಾಗಿ | |
| | ★ ನೀರಿನ ಶಾಶ್ವತ ಗಡಸುತನದ ನಿವಾರಣೆಗೆ | |
| | (ಯಾವುದಾದರೂ ಎರಡು) ½ + ½ | |
| | ii) $CaSO_4 . \frac{1}{2} H_2O$ ½ | |
| | ★ ಮುರಿದ ಮೂಳೆಗಳನ್ನು ಸರಿಯಾದ ಸ್ಥಳದಲ್ಲಿ ಆಧಾರ ಲೇಪನ ಮಾಡಲು. | |
| | ★ ಆಟಿಕೆಗಳು ಮತ್ತು ಅಲಂಕಾರಿಕ ವಸ್ತುಗಳ ತಯಾರಿಕೆಯಲ್ಲಿ. | |
| | ★ ನುಣುಪಾದ ಮೇಲ್ಮೈ ನಿರ್ಮಿಸಲು | |
| | (ಯಾವುದಾದರೂ ಎರಡು) ½ + ½ | 3 |
| | **ಅಥವಾ** | |
| | a) ಸ್ಫಟಿಕೀಕರಣ ನೀರು ಲವಣದ ಒಂದು ಘಟಕ ಸೂತ್ರ ಅಣುವಿನಲ್ಲಿರುವ ನೀರಿನ ಅಣುಗಳ ಸ್ಥಿರ ಸಂಖ್ಯೆ. 1 | |
| | b) i) ಅಡುಗೆ ಸೋಡಾ / ಸೋಡಿಯಂ ಹೈಡ್ರೋಜನ್ (ಬೈ) ಕಾರ್ಬೋನೇಟ್ / $NaHCO_3$ 1 | |
| | ii) ಚಲುವೆ ಪುಡಿ / ಕ್ಯಾಲ್ಸಿಯಂ ಆಕ್ಸಿಕ್ಲೋರೈಡ್ / $CaOCL_2$ 1 | 3 |
| 23. | ಕೆಳಗೆ ಕೊಟ್ಟಿರುವ ಸಂಯುಕ್ತ ವಸ್ತುಗಳ ದ್ರಾವಣಗಳನ್ನು ಗಮನಿಸಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : | |
| | $Pb(NO_3)_2$, $BaCl_2$, $Na_2SO_4$, KI | |
| | a) ಬಿಳಿ ಬಣ್ಣದ ಪ್ರಕ್ಷೇಪವನ್ನು ಪಡೆಯಲು ಪರಸ್ಪರ ವರ್ತಿಸಬೇಕಾದ ದ್ರಾವಣಗಳು ಯಾವುವು ? ಈ ಕ್ರಿಯೆಯ ವಿಧವನ್ನು ತಿಳಿಸಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

b) ಯಾವ ಧನ ಮತ್ತು ಋಣ ಅಯಾನುಗಳ ಸಂಯೋಜನೆಯಿಂದ ಈ ಪ್ರಕ್ಷೇಪವು ಉಂಟಾಗುವುದು ?

***ಉತ್ತರ :***

a) $Na_2SO_4$ & $Bacl_2$ — 1

ರಾಸಾಯನಿಕ ದ್ವಿಸ್ಥಾನಪಲ್ಲಟ / ಪ್ರಕ್ಷೇಪನ ಕ್ರಿಯೆ — 1

b) $Ba^{2+}$ & $SO_4^{2-}$ — 1 — 3

24. ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸಲು ಉಪಯೋಗಿಸುವ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :

i) ಲೋಹದ ಚೂರು

ii) ನಿರ್ಗಮನ ನಾಳ

***ಉತ್ತರ :***




ಚಿತ್ರಕ್ಕೆ — 2

ಭಾಗಗಳಿಗೆ — ½ + ½ — 3

**X.** **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ :** **1 × 4 = 4**

25. a) ಕಾರ್ಬನ್ ಪರಮಾಣುಗಳು $C^{4-}$ ಆ್ಯನ್ ಅಯಾನು ಅಥವಾ $C^{4+}$ ಕ್ಯಾಟ್ ಅಯಾನುಗಳನ್ನು ಉಂಟು ಮಾಡುವುದಿಲ್ಲ. ಏಕೆ ?

b) ಸಾಬೂನು ಸ್ವಚ್ಛಗೊಳಿಸುವ ಪ್ರಕ್ರಿಯೆಯನ್ನು ವಿವರಿಸಿ.

**ಅಥವಾ**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | a) ಕೆಳಗಿನ ಅಣುಗಳ ಇಲೆಕ್ಟ್ರಾನ್ ಚುಕ್ಕಿ ರಚನೆಗಳನ್ನು ಬರೆಯಿರಿ :<br>i) ನೈಟ್ರೋಜನ್ ಅಣು<br>ii) ಈಥೀನ್ ಅಣು<br>b) ಎಥೆನಾಲ್ ಅನ್ನು ಎಥನೋಯಿಕ್ ಆಮ್ಲವಾಗಿ ಪರಿವರ್ತಿಸುವ ಉತ್ಕರ್ಷಣೆ ಕ್ರಿಯೆಯನ್ನು ವಿವರಿಸಿ.<br>***ಉತ್ತರ :*** | | |
| | a) ★ ಕಾರ್ಬನ್ ಪರಮಾಣು ನಾಲ್ಕು ಇಲೆಕ್ಟ್ರಾನ್‌ಗಳನ್ನು ಪಡೆದುಕೊಂಡು $C^{4-}$ ಆ್ಯನ್ ಅಯಾನ್ ಆಗಲು ಸಾಧ್ಯವಿಲ್ಲ, ಏಕೆಂದರೆ ಆರು ಪ್ರೋಟಾನ್‌ಗಳಿರುವ ಬೀಜಕೇಂದ್ರಕ್ಕೆ ಹತ್ತು ಇಲೆಕ್ಟ್ರಾನ್‌ಗಳನ್ನು ಹಿಡಿದಿಟ್ಟುಕೊಳ್ಳುವುದು ಕಷ್ಟ. | 1 | |
| | ★ ನಾಲ್ಕು ಇಲೆಕ್ಟ್ರಾನ್‌ಗಳನ್ನು ಕಳೆದುಕೊಂಡು $C^{4+}$ ಕ್ಯಾಟ್ ಅಯಾನು ಆಗಲು ಸಾಧ್ಯವಿಲ್ಲ, ಏಕೆಂದರೆ ಕಾರ್ಬನ್‌ನಿಂದ ನಾಲ್ಕು ಇಲೆಕ್ಟ್ರಾನ್‌ಗಳನ್ನು ಹೊರತೆಗೆಯಲು ಹೆಚ್ಚಿನ ಶಕ್ತಿಯ ಅಗತ್ಯವಿದೆ. | 1 | |
| | b) ★ ಸಾಬೂನಿನ ಅಯಾನಿಕ್ ತುದಿ ನೀರಿನೊಂದಿಗೆ ಮತ್ತು ಕಾರ್ಬನ್ ತುದಿಯು ಜಿಡ್ಡಿನೊಂದಿಗೆ ವರ್ತಿಸಿ 'ಮಿಸೆಲ್' ಗಳೆಂಬ ರಚನೆಗಳನ್ನು ಉಂಟುಮಾಡುತ್ತವೆ. | 1 | |
| | ★ ಇದು ನೀರಿನಲ್ಲಿ ಎಮಲ್ಷನ್ ಅನ್ನು ಉಂಟು ಮಾಡುತ್ತದೆ. | ½ | |
| | ★ ಸಾಬೂನಿನ ಮಿಸೆಲ್ ನೀರಿನಲ್ಲಿ ಕೊಳೆಯನ್ನು ಕಿತ್ತು ಹೊರತೆಗೆಯಲು ಸಹಾಯ ಮಾಡುತ್ತದೆ. | ½ | 4 |
| | **ಅಥವಾ** | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

a) 

i)  1

ii)  1

b) ಕ್ಷಾರೀಯ ಪೊಟಾಷಿಯಂ ಪರಮಾಂಗನೇಟ್ ಅಥವಾ ಆಮ್ಲೀಯ ಪೊಟಾಷಿಯಂ ಡೈಕ್ರೋಮೇಟ್ ಉಪಸ್ಥಿತಿಯಲ್ಲಿ ಎಥೆನಾಲ್ ಅನ್ನು ಕಾಸಿದಾಗ, ಇದು ಉತ್ಕರ್ಷಣೆಗೊಂಡು ಎಥನೋಯಿಕ್ ಆಮ್ಲ ಉಂಟಾಗುತ್ತದೆ. /

$$CH_3CH_2OH \xrightarrow[\text{ಅಥವಾ ಆಮ್ಲೀಯ } K_2Cr_2O_7 + \text{ ಶಾಖ}]{\text{ಕ್ಷಾರೀಯ } KMnO_4 + \text{ ಶಾಖ}} CH_3COOH$$ 2

4

| A | CCE RF/RR/ PF/PR |
|---|---|

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**

**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2026 ರ ಪರೀಕ್ಷೆ - 1**

**MARCH/APRIL 2026 EXAMINATION - 1**

**ಮಾದರಿ ಉತ್ತರಗಳು**

**MODEL ANSWERS**

ಸಂಕೇತ ಸಂಖ್ಯೆ : **83-K** CODE NO. : **83-K**

## ವಿಷಯ : ವಿಜ್ಞಾನ

## Subject : SCIENCE

(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / Physics, Chemistry & Biology)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(Regular Fresh / Regular Repeater / Private Fresh / Private Repeater)

(ಕನ್ನಡ ಮಾಧ್ಯಮ / Kannada Medium)

(ಜೀವ ವಿಜ್ಞಾನ / Biology)

ದಿನಾಂಕ : 23. 03. 2026 ] [ ಗರಿಷ್ಠ ಅಂಕಗಳು : 80

Date : 23. 03. 2026 ] [ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ - C**<br>**( ಜೀವ ವಿಜ್ಞಾನ )** | |
| **XI.** | **ಬಹು-ಆಯ್ಕೆ ಪ್ರಶ್ನೆಗಳು : 3 × 1 = 3** | |
| 26. | ನೀರಿನ ಸಾಗಾಣಿಕೆಯಲ್ಲಿ ಪತ್ರರಂಧ್ರಗಳ ಪ್ರಮುಖ ಪಾತ್ರವೆಂದರೆ,<br>(A) ನಿರಂತರ ಬಾಷ್ಪವಿಸರ್ಜನೆ ನಡೆಸುವುದು<br>(B) ಕಾರ್ಬನ್ ಡೈಆಕ್ಸೈಡ್ ಅನ್ನು ಹೀರುವುದು<br>(C) ಆಕ್ಸಿಜನ್ ಅನ್ನು ಬಿಡುಗಡೆ ಮಾಡುವುದು<br>(D) ಮೇಲ್ಮುಖ ಸೆಳೆತ ಸೃಷ್ಟಿಸುವುದು<br>*ಉತ್ತರ :* (D) ಮೇಲ್ಮುಖ ಸೆಳೆತ ಸೃಷ್ಟಿಸುವುದು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 27. | ಮಾನವನ ಜೀರ್ಣಾಂಗವ್ಯೂಹದಲ್ಲಿ ಆಹಾರವು ಮುಂದಕ್ಕೆ ಚಲಿಸಿದಂತೆ ಜೀರ್ಣಕ್ರಿಯೆಗೆ ಸಹಾಯಮಾಡುವ ಕಿಣ್ವಗಳು ಕ್ರಮವಾಗಿ,<br>(A) ಪೆಪ್ಸಿನ್ → ಟ್ರಿಪ್ಸಿನ್ → ಲೈಪೇಸ್<br>(B) ಅಮೈಲೇಸ್ → ಪೆಪ್ಸಿನ್ → ಲೈಪೇಸ್<br>(C) ಲೈಪೇಸ್ → ಅಮೈಲೇಸ್ → ಟ್ರಿಪ್ಸಿನ್<br>(D) ಟ್ರಿಪ್ಸಿನ್ → ಪೆಪ್ಸಿನ್ → ಅಮೈಲೇಸ್<br>***ಉತ್ತರ :*** (B) ಅಮೈಲೇಸ್ → ಪೆಪ್ಸಿನ್ → ಲೈಪೇಸ್ | 1 |
| 28. | ಕೊಟ್ಟಿರುವ ಚಿತ್ರವನ್ನು ಗಮನಿಸಿ. ಇದರಲ್ಲಿ ಭಾಗ '*X*' ತೋರಿಸುವ ಪ್ರತಿಕ್ರಿಯೆಯು<br><br>(A) ಧನ ಸ್ಪರ್ಶಾನುವರ್ತನೆ ಮತ್ತು ನಿರ್ದೇಶಿತ ಚಲನೆ<br>(B) ಧನ ಗುರುತ್ವಾನುವರ್ತನೆ ಮತ್ತು ಸ್ವತಂತ್ರ ಚಲನೆ<br>(C) ಧನ ದ್ಯುತಿ ಅನುವರ್ತನೆ ಮತ್ತು ನಿರ್ದೇಶಿತವಲ್ಲದ ಚಲನೆ<br>(D) ಧನ ರಾಸಾಯನಿಕಾನುವರ್ತನೆ ಮತ್ತು ಸ್ವತಂತ್ರ ಚಲನೆ<br>***ಉತ್ತರ :*** (A) ಧನ ಸ್ಪರ್ಶಾನುವರ್ತನೆ ಮತ್ತು ನಿರ್ದೇಶಿತ ಚಲನೆ | 1 |
| **XII.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $3 \times 1 = 3$** | |
| 29. | ಶಲಾಕಾಗ್ರದ ಮೇಲೆ ಪರಾಗದ ಮೊಳೆಯುವಿಕೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ.<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| |  | 1 |
| 30. | ಕೆಳಗಿನವುಗಳಲ್ಲಿ ಕಾಯಜ ಸಂತಾನೋತ್ಪತ್ತಿಯಿಂದ ಬೆಳೆಸಬಹುದಾದ ಸಸ್ಯಗಳ ಗುಂಪನ್ನು ಗುರುತಿಸಿ :<br>*P* : ಗುಲಾಬಿ, ಹಲಸು, ಬ್ರಯೋಫಿಲ್ಲಂ<br>*Q* : ಮನಿಪ್ಲಾಂಟ್, ಸಾಸಿವೆ, ಕಲ್ಲಂಗಡಿ<br>*R* : ಬಾಳೆ, ಗುಲಾಬಿ, ದಾಸವಾಳ<br>*S* : ಪಪಾಯ, ದಾಸವಾಳ, ಸಾಸಿವೆ<br>***ಉತ್ತರ:***<br>★ R / ಬಾಳೆ, ಗುಲಾಬಿ, ದಾಸವಾಳ | 1 |
| 31. | ಸಮುದ್ರ ತೀರದಲ್ಲಿರುವ ಗಂಡು ಆಮೆಗಳ ಸಂತತಿಯು ಇತ್ತೀಚಿನ ದಿನಗಳಲ್ಲಿ ಕ್ಷೀಣಿಸುತ್ತಿದೆ. ಇದಕ್ಕೆ ಕಾರಣವೇನು ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :*** ಆಮೆಗಳಲ್ಲಿ ಲಿಂಗವು ತಳೀಯವಾಗಿ ನಿರ್ಧರಿತವಾಗುವುದಿಲ್ಲ. ಸಮುದ್ರ ತೀರದಲ್ಲಿ ಏರುತ್ತಿರುವ ತಾಪಮಾನದ ಪ್ರಭಾವದಿಂದ ಯುಗ್ಮಜದ ಲಿಂಗ ಹೆಣ್ಣಾಗಿ ಬದಲಾಗುವುದು. / ಜಾಗತಿಕ ತಾಪಮಾನ ಏರಿಕೆಯಿಂದಾಗಿ. | 1 |
| **XIII.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 × 2 = 4** | |
| 32. | ಕೆಳಗಿನ ಹಾರ್ಮೋನುಗಳನ್ನು ಸ್ರವಿಸುವ ಗ್ರಂಥಿಗಳನ್ನು ಹೆಸರಿಸಿ ಮತ್ತು ಈ ಹಾರ್ಮೋನುಗಳ ಕಾರ್ಯ ತಿಳಿಸಿ :<br>i) ಇನ್ಸುಲಿನ್<br>ii) ಥೈರಾಕ್ಸಿನ್<br>**ಅಥವಾ**<br>ಕಾಂಡದ ಬೆಳವಣಿಗೆಗೆ ಸಹಕರಿಸುವ ಎರಡು ಸಸ್ಯ ಹಾರ್ಮೋನುಗಳನ್ನು ತಿಳಿಸಿ. ಸಸ್ಯದ ಬೆಳವಣಿಗೆಯನ್ನು ನಿಲ್ಲಿಸುವ ಹಾರ್ಮೋನಿಗೆ ಒಂದು ಉದಾಹರಣೆ ಕೊಡಿ.<br>***ಉತ್ತರ :***<br>i) ***ಇನ್ಸುಲಿನ್ :***<br>★ ಮೇದೋಜೀರಕ ಗ್ರಂಥಿ ½<br>★ ರಕ್ತದಲ್ಲಿ ಸಕ್ಕರೆಯ ಮಟ್ಟವನ್ನು ನಿಯಂತ್ರಿಸುತ್ತದೆ ½<br>ii) ***ಥೈರಾಕ್ಸಿನ್ :***<br>★ ಥೈರಾಯಿಡ್ ಗ್ರಂಥಿ ½<br>★ ಕಾರ್ಬೋಹೈಡ್ರೇಟ್, ಪ್ರೋಟೀನ್ ಮತ್ತು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ. ½<br>**ಅಥವಾ** | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಆಕ್ಸಿನ್ ½ | |
| | ಜಿಬ್ಬರ್‌ಲಿನ್ ½ | |
| | ★ ಅಬ್ಸಿಸಿಕ್ ಆಮ್ಲ 1 | 2 |
| 33. | ಮಾನವ ಮತ್ತು ಮೀನು, ಇವುಗಳಲ್ಲಿ ಯಾವ ಜೀವಿಯಲ್ಲಿ ಉಸಿರಾಟದ ದರವು ಹೆಚ್ಚಾಗಿದೆ ? ಏಕೆ ? | |
| | ***ಉತ್ತರ :*** | |
| | ★ ಮೀನು 1 | |
| | ★ ಮಾನವ, ಭೂಚರ / ನೆಲವಾಸಿ : ವಾತಾವರಣದಲ್ಲಿ ಆಕ್ಸಿಜನ್ ಪ್ರಮಾಣ ಅಧಿಕವಾಗಿರುತ್ತದೆ / ಮೀನು ಜಲಚರ / ಜಲವಾಸಿ : ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ವಾತಾವರಣದಲ್ಲಿರುವುದಕ್ಕಿಂತ ಕಡಿಮೆ ಇರುತ್ತದೆ. 1 | 2 |
| **XIV.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 3 = 9** | |
| 34. | ಕೆಳಗೆ ಕೊಟ್ಟಿರುವ ಮಾನವನ ಮಿದುಳಿನ ಪ್ರತಿ ಭಾಗದ ಕಾರ್ಯವನ್ನು ತಿಳಿಸಿ : | |
| | i) ಮಹಾಮಸ್ತಿಷ್ಕ (ಮುಮ್ಮೆದುಳು) | |
| | ii) ಅನುಮಸ್ತಿಷ್ಕ | |
| | iii) ಮೆಡುಲ್ಲಾ | |
| | ***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | i) ★ ಆಲೋಚನೆಯ ಕೇಂದ್ರ<br>★ ಗ್ರಾಹಕ ಜೀವಕೋಶಗಳಿಂದ ಮಾಹಿತಿಗಳನ್ನು ಸಮನ್ವಯಗೊಳಿಸಿ ಅರ್ಥೈಸುತ್ತದೆ.<br>★ ಶ್ರವಣ, ವಾಸನೆ, ದೃಷ್ಟಿ ಮತ್ತಿತರ ಕಾರ್ಯಗಳನ್ನು ನಿರ್ವಹಿಸುತ್ತದೆ.<br>(ಯಾವುದಾದರೂ ಒಂದು) 1<br>ii) ಐಚ್ಛಿಕ ಕ್ರಿಯೆಗಳ ನಿಖರತೆ, ದೇಹದ ಭಂಗಿ ಹಾಗೂ ಸಮತೋಲನವನ್ನು ಕಾಪಾಡುತ್ತದೆ. 1<br>iii) ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಯಂಥ ಅನೈಚ್ಛಿಕ ಕ್ರಿಯೆಗಳನ್ನು ನಿಯಂತ್ರಿಸುತ್ತದೆ. 1 | 3 |
| 35. | a) ಕೆಳಗಿನವುಗಳನ್ನು ವ್ಯಾಖ್ಯಾನಿಸಿ :<br>i) ಆಹಾರ ಸರಪಳಿ<br>ii) ಜೈವಿಕ ಸಂವರ್ಧನೆ<br>b) ಓಜೋನ್‌ನ ಪ್ರಾಮುಖ್ಯತೆಯನ್ನು ತಿಳಿಸಿ.<br>**ಅಥವಾ**<br>a) ಜೈವಿಕ ವಿಘಟನೀಯ ವಸ್ತುಗಳೆಂದರೇನು ? ವಿಘಟಕ ಜೀವಿಗಳಿಗೆ ಎರಡು ಉದಾಹರಣೆ ಬರೆಯಿರಿ.<br>b) ಯಾವ ಸಂಶ್ಲೇಷಿತ ರಾಸಾಯನಿಕವು ಓಜೋನ್ ಪದರದ ಕುಸಿತಕ್ಕೆ ಕಾರಣವಾಗಿದೆ ?<br>***ಉತ್ತರ:*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | a) i) ಪರಿಸರದಲ್ಲಿ ಒಂದನ್ನೊಂದು ಭಕ್ಷಿಸುವ ಜೀವಿಗಳ ಸರಣಿ | |
| | ii) ಆಹಾರ ಸರಪಳಿಯ ಉನ್ನತ ಪೋಷಣಾ ಸ್ತರಗಳಲ್ಲಿ ಹಾನಿಕಾರಕ ರಾಸಾಯನಿಕಗಳ ಪ್ರಮಾಣವು ಗರಿಷ್ಠ ಸಾಂದ್ರತೆಯಲ್ಲಿ ಸಂಗ್ರಹವಾಗುವುದು. | |
| | b) ಸೌರಬೆಳಕಿನಿಂದ ಬರುವ ಹಾನಿಕಾರಕ ನೇರಳಾತೀತ ವಿಕಿರಣಗಳಿರುವ ಭೂಮಿಯ ಮೇಲ್ಮೈ ಅನ್ನು ರಕ್ಷಿಸುವುದು. | |
| | **ಅಥವಾ** | |
| | a) ಜೈವಿಕ ಕ್ರಿಯೆಗಳಿಂದ ವಿಭಜಿಸಲ್ಪಡುವ ವಸ್ತುಗಳು. 1 | |
| | *ಉದಾಹರಣೆ:* ಬ್ಯಾಕ್ಟೀರಿಯಾ ಕೊಳೆತಿನಿ (ಶಿಲೀಂಧ್ರಗಳು) ½ + ½ | |
| | b) ಕ್ಲೋರೋಫ್ಲೋರೋ ಕಾರ್ಬನ್‌ಗಳು / ಸಿ.ಎಫ್.ಸಿ. 1 | 3 |
| 36. | ಕೆಂಪು ಹೂವು ಬಿಡುವ ಬಟಾಣಿ ಸಸ್ಯವನ್ನು ( *RR* ) ಬಿಳಿ ಹೂವು ಬಿಡುವ ಬಟಾಣಿ ಸಸ್ಯದೊಂದಿಗೆ ( *rr* ) ಅಡ್ಡಹಾಯಿಸಲಾಗಿದೆ. $F_2$ ಪೀಳಿಗೆಯ ಫಲಿತಾಂಶವನ್ನು ಚಕ್ಕರ್ ಬೋರ್ಡ್‌ನ ಸಹಾಯದಿಂದ ತೋರಿಸಿ. $F_2$ ಪೀಳಿಗೆಯಲ್ಲಿ ದೊರೆತ ಸಸ್ಯಗಳ ವ್ಯಕ್ತರೂಪ ಮತ್ತು ಜೀನ್ ನಮೂನೆ ಅನುಪಾತವನ್ನು ಬರೆಯಿರಿ. | |

***ಉತ್ತರ:***

$F_2$ ಸಂತತಿ

| *ಲಿಂಗಾಣುಗಳು* | *R* | *r* |
|---|---|---|
| *R* | *RR* | *Rr* |
| *r* | *Rr* | *rr* |

2

ವ್ಯಕ್ತರೂಪದ ಅನುಪಾತ : 3 : 1 ½

ಜೀನ್ ನಮೂನೆ ಅನುಪಾತ : 1 : 2 : 1 ½

3

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

**XV.** **ಕೆಳಗಿನ ಪ್ರಶ್ನೆಗೆ ಉತ್ತರಿಸಿ :** **1 × 4 = 4**

37. ಮಾನವನ ಹೃದಯದ ಛೇದ ನೋಟವನ್ನು ತೋರಿಸುವ ಚಿತ್ರ ಬರೆದು, ಕೆಳಗಿನ ಭಾಗಗಳನ್ನು ಗುರುತಿಸಿ :

i) ಸೆಪ್ಟಮ್

ii) ಬಲಹೃತ್ಕುಕ್ಷಿ

***ಉತ್ತರ :***




ಚಿತ್ರಕ್ಕೆ — 3

ಭಾಗಕ್ಕೆ — 2 × ½ 4

**XVI.** **ಕೆಳಗಿನ ಪ್ರಶ್ನೆಗೆ ಉತ್ತರಿಸಿ :** **1 × 5 = 5**

38. a) ನಿಶೇಚನಗೊಂಡ ಅಂಡವು ಸ್ತ್ರೀಯ ಗರ್ಭಕೋಶದಲ್ಲಿ ಹೇಗೆ ಭ್ರೂಣವಾಗಿ ಬೆಳೆಯುತ್ತದೆ ? ತಾಯಿಯ ಗರ್ಭದಲ್ಲಿ ಭ್ರೂಣಾಂಕುರವು ಹೇಗೆ ಪೋಷಣೆಯನ್ನು ಪಡೆಯುತ್ತದೆ ? ವಿವರಿಸಿ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | b) ನಿಶೇಚನದ ನಂತರ ಹೂವಿನಲ್ಲಿ ಉಂಟಾಗುವ ಬದಲಾವಣೆಗಳು ಯಾವುವು ? | |
| | **ಅಥವಾ** | |
| | a) ಮಾನವರು ಸಾಮಾನ್ಯವಾಗಿ ಅನುಸರಿಸುವ ಯಾವುದಾದರೂ ಎರಡು ಗರ್ಭನಿರೋಧಕ ವಿಧಾನಗಳನ್ನು ಪಟ್ಟಿ ಮಾಡಿ. | |
| | b) ಋತುಚಕ್ರವು ಹೇಗೆ ಉಂಟಾಗುವುದು ? ವಿವರಿಸಿ. | |
| | c) ಸ್ವಕೀಯ ಮತ್ತು ಪರಕೀಯ ಪರಾಗ ಸ್ಪರ್ಶಗಳ ನಡುವಣ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ. | |
| | ***ಉತ್ತರ :*** | |
| | a) ★ ನಿಶೇಚನಗೊಂಡ ಅಂಡ (ಯುಗ್ಮಜ) ವಿಭಜನೆ ಹೊಂದಿ ಭ್ರೂಣಾಂಕುರವನ್ನುಂಟು ಮಾಡುತ್ತದೆ. | 1 |
| | ★ ಈ ಭ್ರೂಣಾಂಕುರವು ಗರ್ಭಕೋಶದ ಒಳಸ್ತರಿಗೆ ಅಂಟಿಕೊಂಡು, ಅಂಗಗಳನ್ನು ಬೆಳೆಸಿಕೊಂಡು ಭ್ರೂಣವಾಗುತ್ತದೆ. | 1 |
| | ★ ವಿಶೇಷ ಅಂಗಾಂಶವಾದ ಜರಾಯುವಿನ ಮೂಲಕ ಭ್ರೂಣವು ತಾಯಿಯ ರಕ್ತದ ಮೂಲಕ ಪೋಷಣೆಯನ್ನು ಪಡೆಯುತ್ತದೆ. | 1 |
| | b) ★ ಅಂಡಾಣುವಿನ ಒಳಗೆ ಯುಗ್ಮಜ ವಿಭಜನೆ ಹೊಂದಿ ಭ್ರೂಣವಾಗುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಅಂಡಾಣುವು ಒರಟಾದ ಪದರ ಬೆಳೆಸಿಕೊಂಡು ಬೀಜವಾಗುತ್ತದೆ. | |
| | ★ ಅಂಡಾಶಯ ಬೆಳೆದು, ಮಾಗಿ, ಹಣ್ಣಾಗುತ್ತದೆ. | |
| | ★ ಪುಷ್ಪದಳ, ಪುಷ್ಪಪತ್ರ, ಕೇಸರ, ಶಲಾಕ ನಳಿಕೆ ಮತ್ತು ಶಲಾಕಾಗ್ರಗಳು ಉದುರಿ ಹೋಗುತ್ತವೆ. 4 × ½ | 5 |
| | **ಅಥವಾ** | |
| | a) ★ ಶಿಶ್ನದ ಮೇಲೆ ಕಾಂಡೋಮ್ ಧರಿಸುವುದು. | |
| | ★ ಕಾಪರ್-ಟಿ / ವಂಕಿಯನ್ನು ಗರ್ಭಕೋಶದಲ್ಲಿ ಅಳವಡಿಸಿಕೊಳ್ಳುವುದು. | |
| | ★ ಯೋನಿ ಚೀಲ ಧರಿಸುವುದು. | |
| | ★ ಮಾತ್ರೆಗಳು / ಔಷಧಿಗಳನ್ನು ಬಾಯಿಯ ಮೂಲಕ ಸೇವಿಸುವುದು / ಹಾರ್ಮೋನ್‌ಗಳನ್ನು ಅಸಮತೋಲನಗೊಳಿಸುವುದು. | |
| | ★ ಶಸ್ತ್ರಕ್ರಿಯಾ ವಿಧಾನವನ್ನು ಅನುಸರಿಸುವುದು. | |
| | (ಯಾವುದಾದರೂ ಎರಡು) ½ + ½ | |
| | b) ಅಂಡವು ಫಲಿತಗೊಳ್ಳದಿದ್ದರೆ, | |
| | ★ ಅಂಡವು ಒಂದು ದಿನದವರೆಗೆ ಬದುಕಿರುತ್ತದೆ. ಆಗ ಗರ್ಭಕೋಶದ ಒಳಸ್ತರಿಯು ಬಿರುಕುಬಿಡುತ್ತದೆ, ನಂತರ 1 | |
| | ★ ರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದ ಹೊರಬರುವುದೇ ಋತುಚಕ್ರ. 1 | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

| c) | ಸ್ವಕೀಯ ಪರಾಗಸ್ಪರ್ಶ | ಪರಕೀಯ ಪರಾಗಸ್ಪರ್ಶ |
|---|---|---|
| | ★ ಒಂದೇ ಹೂವಿನಲ್ಲಿ ಪರಾಗರೇಣುಗಳು ಶಲಾಕಾಗ್ರಕ್ಕೆ ವರ್ಗಾವಣೆಯಾಗುವುದು | ★ ಒಂದು ಹೂವಿನಲ್ಲಿ ಮತ್ತೊಂದು ಹೂವಿಗೆ ಪರಾಗವು ವರ್ಗಾವಣೆ ಯಾಗುವುದು |
| | ★ ಮಾಧ್ಯಮಗಳ ಅವಶ್ಯಕತೆ ಇರುವುದಿಲ್ಲ | ★ ಮಾಧ್ಯಮಗಳ ಅವಶ್ಯಕತೆ ಇರುತ್ತದೆ |
| | ★ ದ್ವಿಲಿಂಗಿ ಹೂವಿನಲ್ಲಿ ಜರುಗುವುದು | ★ ಏಕಲಿಂಗಿ ಹಾಗೂ ದ್ವಿಲಿಂಗಿ ಹೂವುಗಳಲ್ಲಿ ಜರುಗುವುದು |

(ಯಾವುದಾದರೂ ಎರಡು) 1 + 1 — 5